


ಆಗಸ್ಟ್ 5. ಚಿಲಿಯ ಅಟಕಾಮ ಮರುಭೂಮಿಯ ಸ್ಯಾನ್ ಜೋಸ್ ತಾಮ್ರ ಮತ್ತು ಚಿನ್ನದ ಗಣಿಯಾಳ. ಕೆಲಸ ಮಾಡುತ್ತಿದ್ದ 48ರ ಹರೆಯದ ವಿಕ್ಟರ್‌ಗೆ ಗಣಿಯಾಳದ ಕತ್ತಲು 69 ದಿನಗಳ ದೀರ್ಘ ಕತ್ತಲಾಗಿ ಲಂಬಿಸುವ ಭಯ ತಿಲ ಮಾತ್ರವೂ ಇರಲಿಲ್ಲ. ಕರ್ತವ್ಯ ಮುಗಿದ ಕೂಡಲೇ ಮನೆಗೆ ತೆರಳಿ ಐವರು ಮಕ್ಕಳೊಂದಿಗೆ ಕೂತು ಗಿಟಾರ್ ಬಾರಿಸುವ ಆತುರ. ಇದ್ದಕ್ಕಿದ್ದಂತೆ ಭೂಮಿ ನಡುಗಿದಾಗ ಭೂಕಂಪವಾಯ್ತೇ ಎಂಬ ಶಂಕೆಯೊಡನೆ ಮೃತ್ಯುಭಯ ಹೊಟ್ಟೆಯೊಳಗಿಂದ ಎದ್ದುಬಂತು. ಅಷ್ಟೇ, ನಿಮಿಷದೊಳಗೆ ಗಣಿಯ ಒಂದು ಭಾಗ ಕುಸಿದು ದೊಡ್ಡದೊಂದು ಬಂಡೆ ಹೊರ ಹೋಗುವ ಮಾರ್ಗವನ್ನೇ ಮುಚ್ಚಿಬಿಟ್ಟಿತು. 2050 ಅಡಿಗಳ ಕೆಳಗೆ ವಿಕ್ಟರ್ ಸೇರಿ 33 ಗಣಿ ಕಾರ್ಮಿಕರ ಚಟುವಟಿಕೆಯ ಗಡಿಯಾರ ಸ್ತಬ್ಧವಾಯಿತು.

ದಕ್ಷಿಣ ಅಮೆರಿಕದ ಸಣ್ಣ ರಾಷ್ಟ್ರ ಚಿಲಿಗೆ ಇದು ಭಾರಿ ಆಘಾತದ ವಿಷಯ. ಬ್ರೆಜಿಲ್, ವೆನೆಜುವೆಲ, ಅರ್ಜೆಂಟೀನಾ ಜೊತೆ ಜಾಗತಿಕವಾಗಿ ಗುರುತಿಸಿಕೊಳ್ಳಲು ಹೋರಾಟ ನಡೆಸುತ್ತಿರುವ ಚಿಲಿಯ ಆರ್ಥಿಕತೆಯ ಮೂಲವೇ ಚಿನ್ನ ಮತ್ತು ತಾಮ್ರದ ಗಣಿಗಳು. ಕಳೆದ ಫೆಬ್ರುವರಿಯಲ್ಲಿ ನಡೆದ ಭೂಕಂಪದಿಂದ ಚೇತರಿಸಿಕೊಳ್ಳುತ್ತಿದ್ದ ಚಿಲಿಗೆ ಗಣಿ ದುರಂತ ಇನ್ನೊಂದು ಹೊಡೆತ. ಪ್ರತಿ ವರ್ಷ ಅಲ್ಲಿ ಗಣಿ ದುರಂತದಲ್ಲಿ ಸರಾಸರಿ 48 ಮಂದಿ ಮೃತಪಡುತ್ತಾರಂತೆ. ಆದರೆ ಇದನ್ನು ಇತರ ಗಣಿ ದುರಂತಗಳ ಹಾದಿಯಲ್ಲೇ ಸಾಗಲು ಬಿಡಬಾರದು ಎಂದು ಸವಾಲಾಗಿ ತೆಗೆದುಕೊಂಡವರು ಈ ವರ್ಷ ಆರಂಭದಲ್ಲಿ ಅಧಿಕಾರಕ್ಕೇರಿದ ಅಧ್ಯಕ್ಷ ಸೆಬಾಸ್ಟಿಯನ್ ಪಿನೆರಾ.

ದುರಂತ ಸಂಭವಿಸಿದಾಗ ಗಣಿಯಲ್ಲಿ ಕಾರ್ಮಿಕರ ಒಂದು ಗುಂಪು ಹೊರಗೆ ಹೋಗುವ ಮಾರ್ಗದ ಬಳಿ ಇತ್ತು. ಹೀಗಾಗಿ ತಕ್ಷಣ ಪಾರಾಯಿತು. ಆದರೆ 33 ಮಂದಿಯಿದ್ದ ಇನ್ನೊಂದು ಗುಂಪು ಆಳದಲ್ಲಿ ಇದ್ದುದರಿಂದ ಸಿಕ್ಕಿಹಾಕಿಕೊಂಡಿತು. ಆದರೆ ತಕ್ಷಣ ಎಲ್ಲರನ್ನೂ ಸೇರಿಸಿ ಧೈರ್ಯ ತುಂಬಿದ್ದು ಸೂಪರ್‌ವೈಸರ್ ಲೂಯಿಸ್ ಉರ್ಜುಲಾ.

ಮೂರೇ ದಿನಗಳಲ್ಲಿ ಗಣಿಯ ಮೇಲ್ಭಾಗದಿಂದ ಐದಿಂಚು ಅಗಲದ ಕೊರೆಯುವ ಕೆಲಸ ಆರಂಭವಾದಾಗ ಅದು ನೇರವಾಗಿ ಗಣಿ ಕಾರ್ಮಿಕರು ಆಶ್ರಯ ಪಡೆದಿದ್ದ ಜಾಗಕ್ಕೆ ಹೋಗಿ ಮುಟ್ಟಿತ್ತು. ಅಷ್ಟು ಕರಾರುವಾಕ್ಕಾಗಿತ್ತು ತಜ್ಞರ ಲೆಕ್ಕಾಚಾರ. ಅದು ದುರಂತ ಸಂಭವಿಸಿದ 17 ದಿನಗಳ ನಂತರ. ಅದುವರೆಗೆ ಕಾರ್ಮಿಕರ ಜೀವ ಉಳಿಸಿದ್ದು 48 ಗಂಟೆಗೊಮ್ಮೆ ಕುಡಿಯುತ್ತಿದ್ದ ಗುಟುಕು ಹಾಲು, ಚೂರು ಮೀನು ಮತ್ತು ಒಂದು ಬಿಸ್ಕತ್. ಕುಡಿಯಲು ವಾಹನಗಳ ರೇಡಿಯೇಟರ್‌ನಲ್ಲಿದ್ದ ನೀರು. ಆದರೆ ಆಮ್ಲಜನಕ ಕೊರತೆಯ ಭಯ. ಜೊತೆಗೆ 30 ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶ. 17 ದಿನಗಳಲ್ಲೇ ತೂಕ ತಲಾ 10 ಕೆಜಿಯಷ್ಟು ಇಳಿದಿತ್ತು.

ಡ್ರಿಲ್‌ನ ತುದಿ ಒಳಗೆ ಇಳಿದಿದ್ದೇ ಅದಕ್ಕೆ 'ನಾವು 33 ಮಂದಿಯೂ ಬದುಕಿದ್ದೇವೆ' ಎಂಬ ಸಂದೇಶದ ಚೀಟಿ ಅಂಟಿಕೊಂಡು ಮೇಲೆ ಬಂದಾಗ 33 ಮಂದಿಯ ಕುಟುಂಬದವರ ಜೊತೆ ಇಡೀ ಚಿಲಿಯ ಜನತೆ ನಿಟ್ಟುಸಿರು ಬಿಟ್ಟಿತು. ಆದರೆ ನಿಜವಾದ ಸವಾಲು ಎದುರಾಗಿದ್ದು ಆಗಲೇ. ಹೇಗೆ ಕಿಂಡಿ ಕೊರೆಯಬೇಕು, ಎಲ್ಲಾ ಕಾರ್ಮಿಕರ ಕೂದಲು ಕೊಂಕದಂತೆ ಮೇಲೆತ್ತಬೇಕು, ತಗುಲುವ ಅಗಾಧ ಖರ್ಚನ್ನು ಯಾರು ಭರಿಸಬೇಕು.. ಎಲ್ಲಾ ಪ್ರಶ್ನೆಗಳನ್ನು ಚರ್ಚಿಸುತ್ತ ಕೂರುವ ಬದಲು ತಕ್ಷಣ ಜಗತ್ತಿನ ಅತ್ಯುತ್ತಮ ರಿಗ್‌ಗಳನ್ನು ಕರೆಸಿ ತುರ್ತು ನಿರ್ವಹಣೆಗೆ ತೊಡಗಿತು ಚಿಲಿ ಸರ್ಕಾರ. ಒಂದು ಕಿಂಡಿಯನ್ನು ಆಮ್ಲಜನಕ ಮತ್ತೊಂದನ್ನು ಆಹಾರ, ಔಷಧಿ ಪೂರೈಕೆಗೆ ಕೊರೆಯಲಾಯಿತು. ನಾಸಾ ವಿಜ್ಞಾನಿಗಳ ಸಲಹೆಯಂತೆ ವಿಟಮಿನ್ ಡಿ ಯುಕ್ತ ಆಹಾರ ಸರಬರಾಜು, ಕಡ್ಡಾಯ ವ್ಯಾಯಾಮದ ಸೂಚನೆ.

ಮೊದಲು ಕೊರೆದ ಐದಿಂಚು ಅಗಲದ ಕಿಂಡಿಯನ್ನು 28 ಇಂಚಿಗೆ ಹಿಗ್ಗಿಸುವ ಕಾರ್ಯಕ್ಕೆ ಅಂದಾಜು ಮಾಡಿದ್ದ ಅವಧಿ ನಾಲ್ಕು ತಿಂಗಳು. ಆದರೆ ಮರುಭೂಮಿಯ ನೀರಿಲ್ಲದ ಒಣ ಜಾಗ, ಕುಸಿಯದ ಗಟ್ಟಿ ಕಲ್ಲುಬಂಡೆಯಿಂದಾಗಿ ಈ ಕೊರೆತ 33 ದಿನಗಳಿಗೇ ಮುಗಿಯಿತು. ನಾಸಾ ಎಂಜಿನೀಯರ್‌ಗಳ ಸಲಹೆ ಮೇರೆಗೆ ಚಿಲಿಯ ನೌಕಾಪಡೆ ತಯಾರಿಸಿದ 14 ಅಡಿ ಎತ್ತರದ, 21 ಇಂಚು ಅಗಲದ ಫೀನಿಕ್ಸ್–2 ಕ್ಯಾಪ್ಸೂಲ್ ಕೂಡಾ ಸಿದ್ಧವಾಯಿತು. ಆಮ್ಲಜನಕದ ಮಾಸ್ಕ್, ವಿಶೇಷ ಧಿರಿಸು, ಶರೀರದ ಆರೋಗ್ಯ ಅಳೆಯುವ ಸಾಧನದೊಂದಿಗೆ 6 ಮಂದಿಯ ರಕ್ಷಣಾ ಕಾರ್ಯಪಡೆಯೂ ಕೆಳಗಿಳಿಯಿತು. ಅಕ್ಟೋಬರ್ 12– 13ರಂದು ಇಪ್ಪತ್ತೆರಡೂವರೆ ಗಂಟೆ ಅವಧಿಯಲ್ಲಿ ಒಬ್ಬೊಬ್ಬರಾಗಿ ಮೇಲೆ ಬಂದಾಗಲೂ ನೆರೆದ ಕುಟುಂಬದ ಸದಸ್ಯರು, 1500 ಮಂದಿ ಪತ್ರಕರ್ತರಿಂದ ಹರ್ಷದ ಹೊನಲು. ವಿಶ್ವಾದ್ಯಂತ ಈ ರಕ್ಷಣಾ ಕಾರ್ಯದ ನೇರ ಪ್ರಸಾರ ಸಾಧ್ಯ ಮಾಡಿಕೊಟ್ಟಿದ್ದು ಚಿಲಿ ಸರ್ಕಾರಿ ಟಿವಿ. ಜಗತ್ತೇ ಬೆರಗಾಯಿತು ಚಿಲಿಯ ಅಗಾಧ ಕೌಶಲ್ಯಕ್ಕೆ.

ಇದೀಗ ಸೆಲೆಬ್ರಿಟಿಗಳಾದ ಅವರನ್ನು ನಿತ್ಯ ಟಿವಿ ಚಾನೆಲ್‌ಗಳು ಕಾಡುತ್ತಿವೆ. ಗಣಿಯಾಳದ ಅನುಭವ ಬಹಿರಂಗಪಡಿಸಲು ಲಕ್ಷಾಂತರ ಡಾಲರ್ ಹಣ ನೀಡುವ ಆಮಿಷ ಒಡ್ಡುತ್ತಿವೆ. 'ಗಣಿಯ ಕೆಳಗೇ ಚೆನ್ನಾಗಿತ್ತು' ಎಂದೊಬ್ಬ ಕಾರ್ಮಿಕ ಹೇಳಿಕೊಂಡಿದ್ದು ವ್ಯವಸ್ಥೆಗೆ ಹಿಡಿದ ಕನ್ನಡಿಯೇನೋ!

■ ಸುಧಾ ಹೆಗಡೆ